

## ಚಹಾ ದುಕಾನಿನಲ್ಲಿ...

ಅಮಾಯಕ ಹುಡುಗಿಯಾಗಿ, ನಾಯಕನೊಂದಿಗೆ ಡುಯೆಟ್ ಹಾಡುವುದರಲ್ಲೇ ಕಳೆದುಹೋಗಿದ್ದ ಶುಭಾ ಪೂಂಜಾ ಅವರಿಗೆ ಈಗ ಸವಾಲೆಸೆಯುವ ಪಾತ್ರಗಳು ದೊರೆತಿವೆಯಂತೆ. ಪ್ರಸ್ತುತ ಚಿತ್ರೀಕರಣ ಚಾಲ್ತಿಯಲ್ಲಿರುವ 'ತರ್ಲೆ ನನ್ಮಕ್ಕಳು' ಸಿನಿಮಾ ಪಾತ್ರದ ಬಗ್ಗೆ ಅವರು ಪುಳಕದಿಂದ ಮಾತನಾಡುತ್ತಾರೆ. ಈ ಚಿತ್ರದಲ್ಲಿ ಅವರದು ಟೀ ದುಕಾನೊಂದರ ಮಾಲಕಿಯ ಪಾತ್ರ. ಚಹಾ ಅಂಗಡಿಯಲ್ಲಿ ಇದ್ದುಕೊಂಡೇ ಸಿನಿಮಾ ನಾಯಕಿಯಾಗುವ ಕನಸು ಆ ಹುಡುಗಿಯದು. 'ಗೋಳಿನ ಕಥೆ ಅಲ್ಲದ, ನಗುವೇ ಚಿತ್ರದುದ್ದಕ್ಕೂ ತುಂಬಿಕೊಂಡಿರುವ' ಈ ಪಾತ್ರ ಶುಭಾಗೆ ಖುಷಿ ಕೊಟ್ಟಿದೆ, ಅದೇ ಕಾಲಕ್ಕೆ ಸವಾಲೂ ಅನ್ನಿಸಿದೆ. ಚಿತ್ರದ ನಿರ್ದೇಶಕ ರಾಕೇಶ್ ಕಥೆಯ ಎಳೆ ಹೇಳಿದಾಗ ಶುಭಾ ಥ್ರಿಲ್ ಆದರಂತೆ.

ಶುಭಾಳಿಗೆ ಜೋಡಿಯಾಗಿ ನಾಗಶೇಖರ್ 'ತರ್ಲೆ ನನ್ಮಕ್ಕಳು' ಕಾಣಿಸಿಕೊಳ್ಳುತ್ತಿದ್ದಾರೆ. ಹುಡುಗಿಯ ನಟನೆಯ ಹುಚ್ಚಿಗೆ ನೀರೆರೆಯುವ ಪಾತ್ರ ಅವರದು. ಹಾಂ, ತರ್ಲೆಗಳ ಪಟ್ಟಿ ಮತ್ತೂ ಇದೆ. ಜಗ್ಗೇಶ್ ಅವರ ಪುತ್ರ ಯತಿರಾಜ್ ಹಾಗೂ ಅಂಜನಾ ದೇಶಪಾಂಡೆ ಚಿತ್ರದ ಮತ್ತೊಂದು ಜೋಡಿ. ಈ ಇಬ್ಬರು ನಾಯಕರನ್ನೂ ಕಾಡುವ ತುಂಟಿಯಾಗಿ ಸೌಜನ್ಯ ಕಾಣಿಸಿಕೊಳ್ಳುತ್ತಿದ್ದಾಳೆ. ಹೀಗೆ, ತರ್ಲೆಗಳ ನಡುವೆ ತಮಾಷೆಯಾಗಿ ಸಾಗುತ್ತಿರುವ ಶೂಟಿಂಗ್ ಕೂಡ ಶುಭಾಗೆ ಪಿಕ್ನಿಕ್ ಅನುಭವ ನೀಡಿದೆ. ಈಗಾಗಲೇ ಚಿತ್ರದ ಶೂಟಿಂಗ್ ಸುಮಾರು ಅರ್ಧದಷ್ಟು ಮುಗಿದಿದ್ದು, 2014ರ ಜನವರಿಯಲ್ಲಿ ಚಿತ್ರವನ್ನು ತೆರೆ ಕಾಣಿಸುವುದು ಚಿತ್ರತಂಡದ ಉದ್ದೇಶ.

'ಮೀನಾಕ್ಷಿ' ಶುಭಾ ಪೂಂಜಾ ನಟಿಸುತ್ತಿರುವ ಇನ್ನೊಂದು ಸಿನಿಮಾ. ಮೀನಾಕ್ಷಿಯಾಗಿ ಅವರು ಮೊದಲ ಬಾರಿಗೆ ಸಾಹಸ ದೃಶ್ಯಗಳಲ್ಲಿ ನಟಿಸುತ್ತಿದ್ದಾರೆ. ಹೀಗೆ, ಎರಡು ವಿಭಿನ್ನ ಪಾತ್ರಗಳ ಮೂಲಕ ಕಲಾವಿದೆಯಾಗಿ ಪೂಜಾ ಖುಷಿಯಾಗಿದ್ದಾರೆ.

## ನೀಗ್ರೊ ಹುಡುಗನೂ ಬಸವನಗುಡಿ ಹುಡುಗಿಯೂ...



ಬೆಂಗಳೂರಿನ ಬಸವನಗುಡಿಯ ಬ್ರಾಹ್ಮಣರ ಹುಡುಗಿ ಹಾಗೂ ನೀಗ್ರೋ ಹುಡುಗನ ನಡುವೆ ಲವ್ವಾದರೆ ಹೇಗಿರುತ್ತೆ? ಸದ್ಯಕ್ಕೆ, 'ಪೆಟ್ರೊಮ್ಯಾಕ್ಸ್' ಲೈಟ್ ಉರಿದ ಹಾಗಿರುತ್ತೆ ಎನ್ನಬಹುದು.

ರಾಜ್ಯೋತ್ಸವ ದಿನದಂದು ಸೆಟ್ಟೇರಿದ ಈ ಸಿನಿಮಾದ ನಿರ್ದೇಶಕರು ವಿಜಯಪ್ರಸಾದ್. 'ಸಿದ್ಲಿಂಗು' ರೀತಿಯ ಭಿನ್ನ ಚಿತ್ರವನ್ನು ನೀಡಿದ್ದ, 'ನೀರ್‌ದೋಸೆ' ಸಿನಿಮಾದ ಮೂಲಕ ನಿರೀಕ್ಷೆಗಳನ್ನು ಹುಟ್ಟಿಸಿದ್ದ ವಿಜಯಪ್ರಸಾದ್ ಈಗ 'ಪೆಟ್ರೊಮ್ಯಾಕ್ಸ್' ಉರಿಸುವ ಪ್ರಯತ್ನದಲ್ಲಿದ್ದಾರೆ. ಅಂದ ಹಾಗೆ, 'ಪೆಟ್ರೊಮ್ಯಾಕ್ಸ್' ಎನ್ನುವುದು 'ಗೋಲ್‌ಮಾಲ್' ಸರಣಿಯ ಚಿತ್ರಗಳು ರೂಪಿಸಿದ ದ್ವಂದ್ವಾರ್ಥದ ಒಂದು ನುಡಿಗಟ್ಟು. ಈ ಹೀನಾರ್ಥವನ್ನು ತಮ್ಮ ಚಿತ್ರದ ಮೂಲಕ ಸುಳ್ಳು ಮಾಡುವುದು ವಿಜಯಪ್ರಸಾದ್ ಉದ್ದೇಶ.

ಹೆಣ್ಣನ್ನು ಆದಿಶಕ್ತಿ ಎನ್ನುತ್ತೇವೆ, ಜಗನ್ಮಾತೆ ಎಂದು ಗೌರವಿಸುತ್ತೇವೆ. ಇದೇ ಹೆಣ್ಣನ್ನು ಪೆಟ್ರೊಮ್ಯಾಕ್ಸ್ ಎಂದು ಕೀಳಾಗಿ ಕಾಣುತ್ತೇವೆ. ಈ ಕೀಳು ಅರ್ಥವನ್ನು ತೊಡೆದು ಹಾಕಿ, ಪೆಟ್ರೊಮ್ಯಾಕ್ಸ್ ಜೊತೆಗಿನ ಬೆಳಕಿನ ರೂಪಕವನ್ನು ಪುನರ್ ಸ್ಥಾಪಿಸುವ ಪ್ರಯತ್ನ ನಿರ್ದೇಶಕರದು. ಚಿತ್ರದ ನಾಯಕನಾಗಿ ನೀನಾಸಂ ಸತೀಶ್ ನಟಿಸುತ್ತಿದ್ದಾರೆ. ನಾಯಕನ ಕಥನಕ್ಕೆ ಪರ್ಯಾಯವಾಗಿ ನೀಗ್ರೊ ಹುಡುಗ – ಬಸವನಗುಡಿ ಹುಡುಗಿಯ ಪ್ರೇಮಕಥೆ ಇರುತ್ತದೆ. ಸದ್ಯಕ್ಕೆ ಸತೀಶ್ ಹೊರತುಪಡಿಸಿದರೆ ತಾರಾಗಣದ ಪಟ್ಟಿ ಖಾಲಿಯಿದೆ. ವಿಜಯಪ್ರಸಾದ್ ನೀಗ್ರೋ ಹುಡುಗನೊಬ್ಬನ ತಲಾಷಿನಲ್ಲಿದ್ದಾರೆ. 'ಕನ್ನಡದ ಹಬ್ಬ'ದಂದು ಚಿತ್ರದ ಮುಹೂರ್ತ ನಡೆದಿದ್ದರೂ, ಪೂರ್ಣ ಪ್ರಮಾಣದ ಶೂಟಿಂಗ್ ಶುರುವಾಗುವುದು ಜನವರಿಯಲ್ಲೇ.

'ಪೆಟ್ರೊಮ್ಯಾಕ್ಸ್' ಬೆಳಕಿನಲ್ಲಿದ್ದರೂ ವಿಜಯಪ್ರಸಾದ್ 'ನೀರ್‌ದೋಸೆ'ಯನ್ನು ಮರೆತಿಲ್ಲ. ನಟಿ ರಮ್ಯಾ ಸಂಸದೆಯ ಬಿಗುಮಾನ ಬಿಟ್ಟು ತಮ್ಮ ಚಿತ್ರದಲ್ಲಿ ನಟಿಸುತ್ತಾರೆ ಎನ್ನುವ ಕನಸನ್ನು ಅವರಿನ್ನೂ ಬಿಟ್ಟುಕೊಟ್ಟಿಲ್ಲ. ಎಲ್ಲವೂ ಸುಖಾಂತ್ಯವಾದರೆ 'ನೀರ್‌ದೋಸೆ' ಮೂಲಕ ಕನ್ನಡ ಚಿತ್ರರಂಗಕ್ಕೊಂದು ಒಳ್ಳೆಯ ಸಿನಿಮಾ ದೊರೆಯಲಿದೆ ಎನ್ನುವುದು ಅವರ ಭರವಸೆ.

★ ರಘು